**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 528/2015**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | **ಚಂದ್ರಶೇಖರ** | **ಪಿ.ಡಬ್ಲ್ಯೂ-05** |
| **ತಂದೆಯ ಹೆಸರು** | : | **ರಾಮಣ್ಣ** | **ಸಿ.ಡಬ್ಲ್ಯೂ-11** |
| **ವಯಸ್ಸು** | : | **47 ವರ್ಷ** | |
| **ಉದ್ಯೋಗ** | : | **ಜೀಂದಾಲ್ ನಲ್ಲಿ ಕೆಲಸ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 23.06.2026.** |
| **ವಾಸಸ್ಥಳ** | : | **ತೋರಣಗಲ್ಲ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ನಮ್ಮ ಊರು ತೋರಣಗಲ್ಲ ಬಸ್ ನಿಲ್ದಾಣದ ಹತ್ತಿರ ಇದ್ದಾಗ ಪೊಲೀಸ್‌ರು ಅಲ್ಲಿಗೆ ಬಂದು ನನ್ನ ಸಹಿ ಪಡೆದಿರುತ್ತಾರೆ. ಯಾವ ಕಾರಣಕ್ಕೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆಯ ಮುಂದೆ ಕಳ್ಳತನ ಆಗಿರುವ ವಿಚಾರದಲ್ಲಿ ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ 1 ರವರ ಮನೆಯ ಮುಂದೆ ಮಾಡಿರುವ ಪಂಚನಾಮೆಗೆ ಸಹಿ ಮಾಡಲು ಹೇಳಿದಕ್ಕೆ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಸಂಜೆ ಸಮಯದಲ್ಲಿ ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 12 ರವರು ಇದ್ದರು. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**(ಎಪಿಪಿಯವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ**

ದಿಃ 29.01.2015 ರಂದು ನನ್ನನ್ನು ಮತ್ತು ಚಾಸಾ 12 ರವರನ್ನು ಚಾಸಾ13

ರವರು ಪಂಚನಾಮೆಗೆ ಕರೆದಿರುತ್ತಾರೆ ಎಂದರೆ ಸರಿ. ಆರೋಪಿ ಕಡೆಯಿಂದ ಜಪ್ತು ಪಡೆಸಿಕೊಂಡಿದ್ದ ಮುದ್ದೆ ಮಾಲುಗಳನ್ನು ಪಂಚನಾಮೆಯ ಮೂಲಕ ನನ್ನ ಸಮಕ್ಷಮ ಜಪ್ತು ಪಡೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ದಿಃ05.07.2014 ರಂದು ಚಾಸಾ 1 ರವರ ಮನೆಯಲ್ಲಿ ಕಳ್ಳತನ ಮಾಡಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ 1 ರವರ ಮನೆಯಲ್ಲಿ ಕಳ್ಳತನ ಆಗಿರುವ ವಿಚಾರದಲ್ಲಿ ಪೊಲೀಸ್‌ರು ನನ್ನ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ಸ್ಥಳದಲ್ಲಿ ಸಂಜೆ 5.45 ರಿಂದ 6.45 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಹಾಜರಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ನೋಡಿರುವುದಿಲ್ಲ. ನಾನು ಆರೋಪಿತರನ್ನು ನೋಡಿದ್ದರು ಸಹ ನೋಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರಃ ಇಲ್ಲ.**

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**